

ಇಂದು ಲಸಿಕೆ ಇಲ್ಲ...

ಪ್ರಕರಣಗಳ ಸಂಖ್ಯೆಯೂ ಕಡಿಮೆ ಆಗುತ್ತಾ ಬಂತು. ಹಾಗಂತ ಜನ ಅಂದುಕೊಂಡರು. ಸೋಂಕು ಓಡಿಸಲು ಜಾಗಟೆ ಬಡಿದು, ಕತ್ತಲಲ್ಲಿ ದೀಪವನ್ನೂ ಬೆಳಗಿಸಿದ ಅವರು 'ಇನ್ನು ನಾವು ಸೇಫ್' ಎಂದು ಭ್ರಮಿಸಿದರು.

ಸುದೀರ್ಘ ಲಾಕ್‌ಡೌನ್‌ನಿಂದ ನಗರಕ್ಕೆ ಮುಕ್ತಿ ದೊರೆಯಿತು. ಗೃಹಬಂಧನದ ಎಲ್ಲ ಬೇಸರವನ್ನು ಒಂದೇ ಏಟಿಗೆ ಕಳೆದುಕೊಳ್ಳುವ ಉಮೇದಿನಿಂದ ಜನ ಬೀದಿಗಿಳಿದರು. ಮುಚ್ಚಿದ್ದ ಅಂಗಡಿಗಳು ಮತ್ತೆ ತೆರೆದವು. ಹೋಟೆಲ್‌ಗಳಲ್ಲೂ ಎಂದಿನ ಜನಜಂಗುಳಿ ಕಾಣತೊಡಗಿತು. ಮಾರುಕಟ್ಟೆಗಳಲ್ಲಿ ಪುನಃ ಗಜಿಬಿಜಿ. ಬಿಎಂಟಿಸಿ ಬಸ್ಸುಗಳು, ಮೆಟ್ರೊ ರೈಲುಗಳು ಮೊದಲಿನಂತೆ ಓಡಾಡತೊಡಗಿದವು. ಹಬ್ಬಗಳೂ ಬಂದುಹೋದವು. ಕೋವಿಡ್ ಅನ್ನು ಸೋಲಿಸಿಬಿಟ್ಟೆವು ಎಂದು ಪ್ರಧಾನಿಯ ಜತೆಗೆ ಜನ ಕೂಡ ಸಂಭ್ರಮಿಸಿದರು. ಆದರೆ, ರೂಪಾಂತರಗೊಂಡ ಸೋಂಕು ಅಷ್ಟರಲ್ಲಿ ಎರಡನೇ ದಾಳಿಯನ್ನು ಶುರುಮಾಡಿತ್ತು. ಡಾ. ರಿಯೂ ಅವರಂತಹ ವೈದ್ಯರು ಗಮನ ಸೆಳೆಯಲು ಯತ್ನಿಸಿದರೂ ಕೇಳಿಸಿಕೊಳ್ಳುವ ಸ್ಥಿತಿಯಲ್ಲಿ ಯಾರೂ ಇರಲಿಲ್ಲ. ಪರಿಸ್ಥಿತಿಯ ಗಾಂಭೀರ್ಯವನ್ನು ಅರಿಯಲು ಆಡಳಿತದ ಚುಕ್ಕಾಣಿ ಹಿಡಿದವರಿಗೂ ತಾವೇ ಪ್ರಭುಗಳು ಎಂದು ಪರಿಭಾವಿಸಿದ ಪ್ರಜೆಗಳಿಗೂ ಕೆಲವು ವಾರಗಳೇ ಬೇಕಾದವು.

ಎರಡನೇ ಹಂತದ ಆಗುಹೋಗುಗಳನ್ನು ವಿವರವಾಗಿ ಹೇಳುವುದಕ್ಕಿಂತ ಮೊದಲು ಕೆಲವು ಘಟನೆಗಳನ್ನು ಇನ್ನೊಬ್ಬ ಸಾಕ್ಷಿಯ ಅಭಿಪ್ರಾಯಗಳ ಮೂಲಕ ದಾಖಲೆ ಮಾಡಬೇಕೆಂಬ ಅಪೇಕ್ಷೆ ಈ ನಿರೂಪಕನಿಗೆ ಇದೆ.


ನಮ್ಮ ಆಸ್ಪತ್ರೆಯಲ್ಲಿ ಪ್ರತಿ ಗಂಟೆಗೆ ಇಷ್ಟು ವೈದ್ಯಕೀಯ ತ್ಯಾಜ್ಯ ಬರುತ್ತೆ ನೋಡಿ

ಆ ಸಾಕ್ಷಿಯ ಹೆಸರು ತಾಮಿರ್ ಹುದ್ದಾರ್. ಡಾ. ರಿಯೂ, ಆತನನ್ನು ತಾಹು ಎಂದೇ ಕರೆಯೋದು. ಗೊಂದಲವೇಕೆ? ಇನ್ನುಮುಂದೆ ನಾವೂ ಹಾಗೆಯೇ ಕರೆಯೋಣ ಬಿಡಿ. ಕೆಲವು ವಾರಗಳ ಹಿಂದೆಯಷ್ಟೇ ಆತ ಬೆಂಗಳೂರಿಗೆ ಬಂದಿದ್ದ. ಅವನಿಗೆ ಅವನದೇ ಆದ ಹಣಕಾಸಿನ ಮೂಲಗಳಿವೆ. ಹಲವರಿಗೆ ಆತ ಪರಿಚಿತನಾಗಿದ್ದರೂ ಎಲ್ಲಿಂದ ಬಂದಿದ್ದ ಮತ್ತು ಯಾಕೆ ಬಂದಿದ್ದ ಎನ್ನುವುದು ಯಾರಿಗೂ ತಿಳಿದಿರಲಿಲ್ಲ. ಸಿಡುಕುಮೋರೆ ಇಲ್ಲದ ಸಂತುಷ್ಟ ಮನುಷ್ಯ. ಮುಗುಳ್ನಗಲು ಯಾವಾಗಲೂ ಸಿದ್ಧನಿರುತ್ತಿದ್ದ. ಆದರೆ, ಅವನನ್ನು ನೋಡಿದ ಯಾರೂ ಈತ 'ಇಂತಹ ವ್ಯಕ್ತಿ' ಎಂದು ಸುಲಭವಾಗಿ ನಿರ್ಣಯಿಸುವುದು ಸಾಧ್ಯವೇ ಇರಲಿಲ್ಲ.

ಅದೇನೇ ಇರಲಿ, ಅವನು ಮಾಡಿಕೊಂಡಿರುವ ಟಿಪ್ಪಣಿಗಳು, ನಾವೆಲ್ಲರೂ ಹಾದುಬಂದಿರುವ ಕಷ್ಟಕಾಲವನ್ನು ಒಂದು ಬಗೆಯಲ್ಲಿ ದಾಖಲು ಮಾಡಿವೆ. ಬೆಂಗಳೂರಿಗೆ ಬಂದ ದಿನದಿಂದಲೂ ಆತ ಟಿಪ್ಪಣಿ ಬರೆಯಲು ಶುರುಮಾಡಿದ್ದಾನೆ. ಸುಂದರ ನಗರವಾಗಿ ಬೆಳೆಯುವ ಎಲ್ಲ ಅವಕಾಶವನ್ನು ಹೊಂದಿದ್ದ ಈ ಊರು ಅಕರಾಳ ವಿಕರಾಳವಾಗಿ ಬೆಳೆದಿದೆ ಎಂಬ ಸಾಲು ಆ ಟಿಪ್ಪಣಿ ಪುಸ್ತಕದ ಆರಂಭದಲ್ಲೇ ಇದೆ. ಮೆಜೆಸ್ಟಿಕ್‌ನಿಂದ ಹೊರಬರುವ ಬಿಎಂಟಿಸಿ ಬಸ್ಸುಗಳು ಹುತ್ತದಿಂದ ಹೊರಬರುವ ಇರುವೆಗಳಂತೆ ಅವನಿಗೆ ಗೋಚರಿಸಿವೆ. ಇರಾನಿಶೈಲಿಯ ಕೆನೆ ಚಹಾವನ್ನು ಕುಡಿಯಲು ನೀವು ಶಿವಾಜಿನಗರದ ಬಸ್ ನಿಲ್ದಾಣದ ಹಿಂಭಾಗದ ರಸ್ತೆಗೆ ಬರಬೇಕು ಎಂದೂ ಆತ ಬರೆಯುತ್ತಾನೆ. ಇಂತಹ ಮಾಹಿತಿ, ಸೋಂಕು ಹರಡುವ ಮುಂಚಿನ ದಿನಗಳ ಟಿಪ್ಪಣಿ ಪುಟಗಳಲ್ಲಿ ಇದ್ದಂಥದು. ಮುಂದಿರುವ ಮಾಹಿತಿ, ನಗರದಲ್ಲಿ ಮೊದಲ ಸೋಂಕು ಪ್ರಕರಣ ದಾಖಲಾದ ನಂತರದ ದಿನಗಳ ಟಿಪ್ಪಣಿಗಳಿಂದ ಪಡೆದಿದ್ದು:

'ಎಂದಿಗೂ ಯಾರ ಅಂಕೆಗೂ ಸಿಗದಂತೆ ಸ್ವಚ್ಛಂದವಾಗಿ ಇರಲು ಬಯಸಿದ ಈ ಊರಿನ ಜನರಿಗೆ